**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 6439/2022** ಸಿ.ಡಬ್ಲ್ಯೂ -1

ಪಿ.ಡಬ್ಲ್ಯೂ -1

ಹೆಸರು : ಮಲ್ಲಿಕಾರ್ಜುನ

ತಂದೆ:ಗಂಡ : ಸಿದ್ದಪ್ಪ

ವಯಸ್ಸು : 38 ವರ್ಷ

ಉದ್ಯೋಗ : ಡಿ.ವಾಯ.ಎಸ್ಪಿ. ಮಂಗಳೂರು

ವಾಸಸ್ಥಳ : ಮಂಗಳೂರು

ದಿನಾಂಕ:16.11.2023

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು 12.11.2019 ರಿಂದ 17.01.2022 ರವರೆಗೆ ಆಳಂದ ಉಪವಿಭಾಗದಲ್ಲಿ ಡಿ.ವಾ .ಎಸ್ಪಿ. ಎಂದು ಕಾರ್ಯನಿವರ್ಹಿಸಿದ್ದೇನೆ.

ದಿ.13.01.2020 ರಂದು ನಾನು ಕಚೇರಿಯಲ್ಲಿದ್ದಾಗ 12.00 ಗಂಟೆ ಸುಮಾರಿಗೆ ಬಾತ್ಮಿದಾರರು ಕಡಗಂಚಿ ಕ್ರಾಸ ಹತ್ತಿರ ಒಬ್ಬ ವ್ಯಕ್ತಿ ನಾಡ ಪಿಸ್ತೂಲ ಇಟ್ಟುಕೊಂಡು ತಿರುಗಾಡುತ್ತಿದ್ದಾನೆ ಎಂದು ಮಾಹಿತಿ ನೀಡಿದ್ದು, ಆಗ ನಾನು ಆಳಂದದಿಂದ ನಮ್ಮ ವಾಹನಚಾಲಕರಾದ ಚಾಸಾ-8 ರವರೊಂದಿಗೆ ನಮ್ಮ ವಾಹನ ಸಂಖ್ಯೆ ಕೆಎ-32/ಜಿ-761 ನೇದ್ದರಲ್ಲಿ ಕುಳಿತು ಮುನ್ನೊಳ್ಳಿ ಮಾರ್ಗವಾಗಿ ನರೋಣಾ ಪೋಲಿಸ ಠಾಣೆಗೆ ಸುಮಾರು 1.00 ಗಂಟೆಗೆ ತಲುಪಿರುತ್ತೇನೆ. ನರೋಣಾ ಠಾಣೆಯಲ್ಲಿ ಚಾಸಾ-4 ರಿಂದ 7 ರವರು ಹಾಜರಿದ್ದು ಅವರಿಗೆ ಬಾತ್ಮಿ ವಿಷಯ ತಿಳಿಸಿ ಚಾಸಾ-4 ರವರಿಗೆ ಇಬ್ಬರು ಪಂಚರನ್ನು ಕರೆತರಲು ತಿಳಿಸಿದ್ದು ಚಾಸಾ-4 ರವರು ಚಾಸಾ-2, 3 ರವರನ್ನು ಪಂಚರಾಗಿ ಕರೆಯಿಸಿದ್ದು, ಅವರಿಗೂ ಬಾತ್ಮಿ ವಿಷಯ ತಿಳಿಸಿ ಪಂಚರಾಗಲು ಒಪ್ಪಿಕೊಂಡಿರುತ್ತಾರೆ. ನಮ್ಮ ವಾಹನದಲ್ಲಿ ಪಂಚರು, ನಮ್ಮ ಸಿಬ್ಬಂದಿಗಳು ಹಾಗೂ ನಾವೆಲ್ಲರೂ ಸೇರಿಕೊಂಡು 1.30 ಗಂಟೆಗೆ ನರೋಣಾ ಠಾಣೆಯಿಂದ ಕಡಗಂಚಿ ಕ್ರಾಸ ಬಳಿ ಹೊರೆಟೇವು. ಸುಮಾರು 2.00 ಗಂಟೆಗೆ ಕಡಗಂಚಿ ಕ್ರಾಸ ತಲುಪಿದಾಗ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಲು ಪ್ರಾರಂಭಿಸಿದಾಗ ಆಗ ನಾವೆಲ್ಲರೂ ಅವನನ್ನು ಹಿಡಿಯಲು ಪ್ರಯತ್ನಿಸಿ ಅವನನ್ನು ಹಿಡಿದಿರುತ್ತೇವೆ. ಅವನನ್ನು ವಿಚಾರಿಸಿದಾಗ ಅವನ ಹೆಸರು ಶ್ರೀಶೈಲ ತಂದೆ ಭಂಗರಗಿ ಎಂದು ಹೇಳಿರುತ್ತಾನೆ, ಪಂಚರ ಸಮಕ್ಷಮ ಆರೋಪಿಯನ್ನು ಪರಿಶೋಧನೆ ಮಾಡಿದಾಗ ಸದರಿ ವ್ಯಕ್ತಿಯ ಪ್ಯಾಂಟಿನ ಬಲಜೇಬಿನಿಂದ ಒಂದು ನಾಡ ಪಿಸ್ತೂಲ ದೊರೆತಿದ್ದು, ಎಡಜೇಬನ್ನು ಪರಿಶೊಧಿಸಿದಾಗ 6 9 ಎಂಎಂ ಜೀವಂತ ಗುಂಡುಗಳು, 2 ಮಾಗಜೀನಗಳು ದೊರತಿರುತ್ತವೆ. ಪಂಚರ ಸಮಕ್ಷಮ ಅವುಗಳನ್ನು ಪರಿಶೀಲಿಸಿದಾಗ ನಾಡಪಿಸ್ತೂಲ ಅಂದಾಜು ರೂ.20,000/-, 6 ಜೀವಂತ ಗುಂಡುಗಳ ಮೌಲ್ಯ ರೂ.2000/-, 2 ಮಾಗಜೀನಗಳ ಮೌಲ್ಯ ರೂ.3000/- ಇರುತ್ತದೆ. ಪಂಚರ ಸಮಕ್ಷಮ ಮದ್ಯಾಹ್ನ 2.00 ರಿಂದ 3.00 ರ ವರೆಗೆ ಪಂಚರ ಸಮಕ್ಷಮ ಆರೋಪಿಯಿಂದ ಸದರಿ ವಸ್ತುಗಳನ್ನು ನಮ್ಮ ವಶಕ್ಕೆ ಪಡೆದಿರುತ್ತೇವೆ ಹಾಗೂ ಜಪ್ತಿ ಪಂಚನಾಮೆ ಮಾಡಿರುತ್ತೇವೆ. ಇವುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅವುಗಳನ್ನು ದಾರದಿಂದ ಹೊಲೆದು ಅದರ ಮೇಲೆ ವಿಎಂ ಎಂದು ಆಂಗ್ಲ ಭಾಷೆಯಲ್ಲಿ ಅರಗಿನಿಂದ ಸೀಲ್ ಮಾಡಲಾಯಿತು. ಸದರಿ ಜಪ್ತಿ ಪಂಚನಾಮೆಯ ಭಾವಚಿತ್ರಗಳನ್ನು ತೆಗೆಯಲಾಯಿತು. ಆರೋಪಿಯನ್ನು ಸದರಿ ವಸ್ತಗಳ ಬಗ್ಗೆ ವಿಚಾರಣೆ ಮಾಡಲಾಗಿ ಅವನು ಮದ್ಯಪ್ರದೇಶದ ಒಬ್ಬ ವ್ಯಕ್ತಿಯಿಂದ ರೂ.25000/-ಗಳಿಗೆ ಖರೀದಿಸಿರುತ್ತಾನೆ ಎಂದು ತಿಳಿಸಿದ್ದಾನೆ ಹಾಗೂ ಆರೋಪಿ ಸರ್ಕಾರದಿಂದ ಯಾವುದೇ ಅನುಮತಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಜಪ್ತಿ ಪಂಚನಾಮೆಯ ನಂತರ ಮು.ಮಾ. ಹಾಗೂ ಆರೋಪಿಯೊಂದಿಗೆ ಸೂಮಾರು 4.00

ಗಂಟೆಗೆ ಠಾಣೆಗೆ ಹೋಗಿ ಮುಂದಿನ ಕ್ರಮಕ್ಕಾಗಿ ಠಾಣಾಧಿಕಾರಿಗೆ ಒಪ್ಪಿಸಿರುತ್ತೇನೆ.

ಸಾಕ್ಷಿಗೆ ಈಗ ಜಪ್ತಿ ಪಂಚನಾಮೆ ತೋರಿಸಿ ಅದನ್ನು ಗುರುತಿಸಿರುವುದರಿಂದ ಜಪ್ತಿ ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ವರದಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ವರದಿಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಒಂದು ಪಿಸ್ತೂಲ, 2 ಮ್ಯಾಗಜೀನ, 6 ಗುಂಡುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ರಿಂದ 3 ಎಂದು ಗುರುತಿಸಲಾಯಿತು.

**<u>ಪಾ. ಸವಾಲುಃ- ಆರೋಪಿತರ ಪರ ಎ.ಸಿ.ಟಿ.ವಕೀಲರಿಂದಃ</u>**

ದಿ.13.01.20200 ರಂದು ಬಾತ್ಮಿ ಬಂದ ನಂತರ ನಾನು ನರೋಣಾ ಪೋಲಿಸ ಠಾಣೆಗೆ ಆಳಂದದಿಂದ 12.00 ಗಂಟೆಗೆ ಹೊರೆಟೇನು. ನೆರೋಣಾ ಠಾಣೆಯಲ್ಲಿ ಅರ್ಧ ಗಂಟೆಗಳ ಕಾಲ ಹಿಡಿಯಿತು. ಚಾಸಾ-2 ರವರು ನರೋಣಾ ಪೋಲಿಸ ಠಾಣೆಯ ಹಲವು ಪ್ರಕರಣಗಳಲ್ಲಿ ಪಂಚರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಕಡಗಂಚಿ ತಲುಪಿದಾಗ ಆರೋಪಿ ಶಾಂತಲಿಂಗೇಶ್ವರ ಕಮಾನ ಹತ್ತಿರ ಇದ್ದನು. ನಮ್ಮನ್ನು ನೋಡುತ್ತಲೇ ಆರೋಪಿ ಓಡಲು ಪ್ರಯತ್ನಿಸಿದನು. ಆರೋಪಿ ಕಡಂಗಚಿ ಊರಿನ ಕಡೆಗೆ ಓಡಲು ಪ್ರಾರಂಭಿಸಿದನು. ನಮ್ಮನ್ನುನೋಡಿ ಅರೋಪಿ 30-35 ಅಡಿಗಳವರೆಗೂ ಓಡಿ ಹೋದನು. ಪಂಚನಾಮೆಯಲ್ಲಿ ಪೂರ್ವ ದಿಕ್ಕಿಗೆ ದೇವಸ್ಥಾನ ಎಂದು ಬರೆದಿದ್ದು ಆದರೆ ಅಲ್ಲಿ ಶಾಲೆ ಇದೆ ಎಂದರೆ ಸಾಕ್ಷಿ ಶಾಲೆ ಇದೆ ಎಂದು ಹೇಳುತ್ತಾರೆ. ಆರೋಪಿ ಖಜೂರಿ ಗ್ರಾಮದವನು ಎಂದರೆ ಸರಿ. ಆರೋಪಿ ಶ್ರಿಮಂತ ಕುಟುಂಬಕ್ಕೆ ಸೇರಿದವನು ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೂ ಮು.ಮಾ.ಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನಗೆ ಬಂದ ತಪ್ಪು ಮಾಹಿತಿ ಆಧಾರದ ಮೇಲೆ ಸುಳ್ಳು ಪಂಚನಾಮೆಯನ್ನು ತಯಾರಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಒಳ್ಳೆಯ ಕುಟುಂಬಕ್ಕೆ ಸೇರಿದವನಾಗಿದ್ದು ಅವನ ಮೇಲೆ ಯಾವುದೇ ಪ್ರಕರಣಗಳು ಇಲ್ಲದಿದ್ದು ಅವನ ವಿರುದ್ಧ ಅಂಕಿ ಸಂಖ್ಯೆಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.